ಯಕ್ಷಗಾನ

ಆದಿಚುಂಚನಗಿರಿ ಶ್ರೀ ಕಾಲಭೈರವೇಶ್ವರ ಮಹಾತ್ಮೆ

ಪ್ರಸಂಗ ರಚನೆ – ಎಂ.ಎ.ಹೆಗಡೆ, ಶಿರಸಿ.

ಸೌರಾಷ್ಟ್ರ ತ್ರಿವುಡೆ

ಕೇಳಿ ವಿಸ್ಮಿತನಾಗಿ ಭೂಪನು।
ಪಾಳಯವನೊಡಗೂಡಿ ಬಂದನು।
ಫಾಲನೇತ್ರನ ನೆನೆವುತೆಂದನು ।ಮೆಳೆಯ ನೋಡಿ ॥1॥
ಅರಿಯದಪರಾಧವನು ಗೈದೆವು।
ಕರುಣದಿಂದಲಿ ಕಾವುದೆಮ್ಮನು।
ಪರಮಪುರುಷನೆ ಪೇಳು ಮುಂದಣ।ಪರಿಯ ದಯದಿ ॥2॥

ವಾರ್ಧಕ

ನೆತ್ತರಿದು ಶುಭಕರವು ವಂಶತಿಲಕವು ನನಗೆ
ಪುತ್ರನುದಿಸುವನವನ ಜೋಗಿಯಾಗಿಸಬೇಕು
ಸತ್ತಮೇದರ ರುಂಡಗಳ ಗೈಸು ಕಲ್ಲಿನಲಿ ಪಂಚಲಿಂಗಾತ್ಮಕನಗೆ
ಎತ್ತರದ ಗುಡಿಯೊಂದ ಕಟ್ಟಿಪೂಜೆಯ ಮಾಡು
ತುತ್ತತುದಿ ಬೆಟ್ಟದಲಿ ಸ್ತಂಭಸ್ಥಾಪನೆ ಮಾಡಿ
ಹೊತ್ತಿಪುದು ದೀಪವನು ಮಂಗಲವು ನಿನಗಪ್ಪುದೆಂದು ವಾಣಿಯು ಪೇಳಲು ॥1॥

[ರಾಜನೆ,ಈ ನೆತ್ತರು ಅಶುಭಕರವಲ್ಲ.ಮಂಗಲಕರ.ಇದು ನನ್ನ ವಂಶತಿಲಕವೆಂದು ಭಾವಿಸು. ನಿನಗೆ ಸಂತಾನವು ಲಭಿಸುತ್ತದೆ. ಆದರೆ ಈಮೇದಾರರು ಸಾಯುವುದಕ್ಕೆ ಕಾರಣನಾದ ನೀನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅದಕ್ಕಾಗಿ ಕಲ್ಲಿನಲ್ಲಿ ಅವರ ರುಂಡಗಳನ್ನು ಮಾಡಿಸು. ಅಲ್ಲದೆ ಹುಟ್ಟುವ ಮಗನನ್ನು ಜೋಗಿಯಾಗಿಸಬೇಕು. ಗುಡ್ಡದ ತುದಿಯಲ್ಲಿ ಸ್ತಂಭವೊಂದನ್ನು ನಿಲ್ಲಿಸಿ ಅದರ ಮೇಲೆ ದೀಪ ಬೆಳಗುವಂತೆ ಮಾಡಬೇಕು. ಇದು ಪವಿತ್ರವಾದ ಕ್ಷೇತ್ರ. ಇದು ನನಗೆ ಕಾಶಿಯಂತೆಯೇ ಪ್ರಿಯವಾದ ಕ್ಷೇತ್ರವಾಗಿದೆ. ಇದು ಸಿದ್ಧಿಕ್ಷೇತ್ರ. ಹೋಗಿ ಬಾ ಮಂಗಲವಾಗಲಿ

ನಾದನಾಮಕ್ರಿಯೆ ಅಷ್ಟ

ಫಾಲನೇತ್ರನ ನುಡಿ ಕೇಳುತ್ತನೃಪ।
ತಾಳಿ ಹರ್ಷವ ಕುಣಿದಾಡುತ್ತ॥
ಪಾಲಿಪೆ ವಚನವ ನೆನ್ನುತ್ತ।ಬಿದಿ।
ರೋಳಿಯ ಕಡಿಸಲು ನಡೆಯುತ್ತ ॥1॥
ಮೆಳೆಯನು ಕಡಿಯಲು ತಾನಲ್ಲಿ।ಮಿಂಚು।
ಹೊಳೆದಂತೆ ಲಿಂಗ ಪುಟ್ಟಿರಲಲ್ಲಿ॥
ತಿಳಿದು ತೊಟ್ಟಿಲ ನೆಯ್ದು ಪೂಜಿಸಿ।ದಿನ।
ಗಳೆಯದೆ ಗುಡಿ ಕಟ್ಟಲನುಗೈಸಿ ॥2॥

ಪ್ರಸಂಗದ ಪಾತ್ರ

ಅರಣೆರಾಜ
ಧೂತ
ಋಷಿಗಳು
ಈಶ್ವರ
ಚುಂಚಾಸುರ
ಕಂಚಾಸುರ
ಕಾಲಭೈರವ
ಕುರುಬ ಕನ್ಯೆ ಮಾಳವಿ
ತಿಮ್ಮಪ್ಪ ಶೆಟ್ಟಿ
ಅರ್ಜುನ ಜೋಗಿ
ಪದ್ಮಾವತಿ
ದೇವಾಜಮ್ಮ
ಮಾವ
ಆದಿಶೇಷ
ಶ್ರೀಗಳು

ದಿವ್ಯ ಆಶೀರ್ವಾದ ಮಾರ್ಗದರ್ಶನ
ಪ.ಪೂ.ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳು
ಪೀಠಾಧ್ಯಕ್ಷರು, ಆದಿಚುಂಚನಗಿರಿ.

ಪ.ಪೂ.ಶ್ರೀ ಶ್ರೀ ಪ್ರಸನ್ನನಾಥ ಮಹಾಸ್ವಾಮಿಗಳು
ಪ್ರಧಾನಕಾರ್ಯದರ್ಶಿಗಳು, ಆದಿಚುಂಚನಗಿರಿ.

ಸಲಹೆ : ವಿದ್ವಾನ್ ಉಮಾಕಾಂತ ಭಟ್, ಮೇಲುಕೋಟೆ.

ನಿರ್ದೇಶನ : ಶ್ರೀ ಕೊಳಗಿ ಕೇಶವ ಹೆಗಡೆ

ಸಂಘಟನೆ : ವಿದ್ವಾನ್ ದತ್ತಮೂರ್ತಿ ಭಟ್, ಶಿವಮೊಗ್ಗ.
ನಾಟ್ಯಶ್ರೀ ಕಲಾ ತಂಡ (ರಿ.), ಶಿವಮೊಗ್ಗ.
ಮೊ : 9480473311

ಭಾಮಿನಿ

ಆದಿಯೊಳು ವರಸಿದ್ಧಿದಾಯಕ
ವೇದವಂದಿತ ವಿಘ್ನರಾಜನ
ಪಾದದ್ವಂದ್ವಕೆ ಮಣಿದು ಸಿರಿಸರಸತಿಯರನು ನುತಿಸಿ
ಐದು ಪೆಸರಿನ ಲಿಂಗರೂಪದೊ
ಳಾದಿಚುಂಚನಗಿರಿಯೊಳ್ನೆಲಸಿದ
ನಾದಿಮೂರುತಿ ದೇವಗಂಗಾಧರಗೆ ಶಿರವಾಗಿ ॥ 1 ॥
ವೀರತನದುಬ್ಬಟೆಯೊಳೆಮಗೆಣೆ
ಯಾರುಲೋಕದೊಳೆನುತ ಜನಗಳ
ಗಾರುಗೆಡಿಸುತಲಿರುವ ಸೊಕ್ಕಿದ ಕಂಚ ಚುಂಚರನು
ನೀರಗುಳ್ಳೆಯ ತೆರದಿ ನೊಣೆಯುತ
ಕೋರಿದವರಿಷ್ಟಾರ್ಥವೀಯುವ
ಭೈರವೇಶ್ವರಗೆರಗಿ ಪೇಳುವೆನೀ ಕಥಾಮೃತವ ॥ 2 ॥

ಅರಣೆರಾಜನ ಪ್ರವೇಶ

ಸೌರಾಷ್ಟ್ರತ್ರಿವುಡೆ

ಧರೆಯೊಳಗೆ ಚೋಳೂರು ದೇಶವ।
ಪರಮವಿಭವದಿ ಪಾಲಿಸುತ್ತಿರ।
ಲರಸನಾರಣಿಯೊಂದುದಿನಮನ।ದಿರವನೊರೆದ ॥ 1 ॥

ಕಲ್ಯಾಣಿ ಅಷ್ಟ

ಕರುಣವ ತೋರಿದ ಹರನು।ಎನ್ನ।
ಕೊರತೆಯ ನೀಗಿದನವನು॥
ಒರೆದನು ಕನಸಿನೊಳೈತಂದು ನಿನಗಿನ್ನು।
ತರಳರಿಲ್ಲದ ಚಿಂತೆ ದೂರವಾಗುವುದೆಂದು ॥ 1 ॥

ತೋಡಿ ಅಷ್ಟ

ಸಿಗಲಿಲ್ಲ।ಬಿದಿರು।ಸಿಗಲಿಲ್ಲ ॥ಪ॥
ಸಿಗದಿರೆ ಬಿದಿರೆಮ್ಮ ಪ್ರಾಣಕ್ಕೆ ಕುತ್ತು।
ಸಿಗಿದು ಹಾಕುವರಯ್ಯೋ ಬೀಳ್ವೆವು ಸತ್ತು ॥ಅ.ಪ.॥
ಹೆಂಡತಿಯೊಬ್ಬಳೆ ಮಗನು ಸಣ್ಣವನು।
ಕಂಡವರ್‍ಯಾರನೊ ಅಪ್ಪನೆನ್ನುವನು॥
ತುಂಡುಭೂಮಿಯು ಇಲ್ಲ ಸಿಗುವುದೆ ಕೂಳು।
ಗಂಡು ದಿಕ್ಕಿಲ್ಲದ ಮನೆತುಂಬ ಗೋಳು ॥1॥

ಯಾಕಿಂಥ ಚಾಕರಿ ಸಿಕ್ಕಿತೊ ನಮಗೆ।
ಲೋಕದ ಬದುಕಿನ್ನು ತುತ್ತಾಯ್ತು ಯಮಗೆ॥
ಲೋಕನಾಯಕ ಗಂಗಾಧರನನ್ನು ನಾವು।
ಏಕಮನದಿ ಭಜಿಸಿದರುಳಿಸುವನು ॥2॥

ವಾರ್ಧಕ

ಎಂದವರು ನಿಶ್ಚಯಿಸಿ ದೇವಗಂಗಾಧರನೆ
ನೊಂದೆವೀ ಕಾರ್ಯದಲಿ ಮುಂದೆಮಗೆ ದಾರಿಯನು
ತಂದೆ ನೀ ತೋರುವುದು ಕಾಯುವುದು ಕರುಣದಿಂದೆನುತ ಕಣ್ಮುಚ್ಚಿ ನಿಲಲು
ಕಂದೆರೆದು ಕಾಂಬನಿತರೊಳಗಲ್ಲಿ ತೋರಿದುದು
ಸಂದುಗಳ ಹೊಂದಿರದ ಸುಂದರದ ಹಿಂಡೊಂದು
ಕಂದುಗೊರಳನ ಮಹಿಮೆಯೆಂದು ಸಂತೋಷದಲಿ ಕುಣಿದು
ಕುಪ್ಪಳಿಸುತವರು ॥1॥

ಕಾಂಬೋಧಿ ರೂಪಕ

ಸಿಕ್ಕಿತೆಮಗೆ ಚೊಕ್ಕ ಬಿದಿರು।ಫಕ್ಕನೆನ್ನುತ।
ಫಕ್ಕನವರು ಧಾವಿಸುತ್ತ।ಕತ್ತಿಯೆತ್ತುತ ॥1॥
ಕಡಿಯಲೊಡನೆ ಬಿದಿರಿನಂದ ।ನೆತ್ತರೊಸರಲು।
ನಡುಗಿ ಕೂಗಿ ಬೀಳುತವರು।ಓಡತೊಡಗಲು ॥2॥
ಓಡಬೇಡಿ ನಿಲ್ಲಿರೆಂಬ।ದನಿಯು ಕೇಳಲು।
ಓಡಲಾರದಾಯ್ತು ನಿಂತು।ಕೇಳ್ದರವದಿರು ॥3॥

ಭಾಮಿನಿ

ಬೆದರದಿರಿನೀವೆಲ್ಲ ಖಳರನು
ಸದೆವೆ ಭೈರವರೂಪದಿಂದಲಿ
ಸದನವನು ಸೇರುವುದು ಚಿಂತೆಯ ತೊರೆದು ನೀವೆನುತ

ಮದನಹರ ಬೀಳ್ಕೊಳ್ಳುತವರನು
ಮದಮುಖರ ಭಂಗಿಸಲು ನೆನೆದನು
ಅಧಮನಾಶಕ ನೇತ್ರಸಂಭವ ಕಾಲಭೈರವನ ॥1॥

ಕಾಲಭೈರವನ ಪ್ರವೇಶ (ತಾಂಡವ ನೃತ್ಯ)
ಅಷ್ಟತಾಳ

ತಾಂಡವನಾಟ್ಯವನು ।ಆಡಿದ ಭೈರವಾಖ್ಯ ಶಿವನು ॥ಪ॥

ಇಟ್ಟಿಹ ಹೆಜ್ಜೆಗೆ ಬೆಟ್ಟಗಳುಡುಗಲು
ದಿಟ್ಟಿಸಿದರೆ ದೆಸೆಗೆಟ್ಟರೆ ದಿಗ್ಗಜ॥ತಾಂಡವ ನಾಟ್ಯವನು ॥1॥

ದುಷ್ಟರ ಶಿಕ್ಷಿಸಿ ಶಿಷ್ಟರ ರಕ್ಷಿಸಿ
ಸೃಷ್ಟಿಯ ಪಾಲಿಪ ಶ್ರೇಷ್ಠನು ಮೋದದಿ॥ತಾಂಡವನಾಟ್ಯವನು ॥2॥

ಬೇಡಿದ ಜನಗಳಿಷ್ಟಾರ್ಥವ ಸಲಿಸುತ।
ಕೇಡುಗ ಜನಗಳ ಹೆಡೆಮುಡಿ ಕಟ್ಟುತ॥ತಾಂಡವನಾಟ್ಯವನು ॥3॥

ಶಿವನ ಮತ್ತೊಂದು ರೂಪ ಈ ಭೈರವ. ಬ್ರಹ್ಮನು ಗರ್ವದಿಂದ ತಾನೇ ಹೆಚ್ಚೆಂದು ಬೀಗಿದಾಗ ಅವನ ತಲೆಯನ್ನು ತೆಗೆಯಲು ನೇತ್ರಾಗ್ನಿಯಿಂದ ಉದ್ಭವಿಸಿದ್ದು ಈ ಭೈರವರೂಪ. ಇದರಿಂದ ಬ್ರಹ್ಮನ ತಲೆಯನ್ನು ತೆಗೆದ ಮೇಲೆ ಮತ್ತೆ ಕಾರ್ಯವೇನೂ ಇರಲಿಲ್ಲ. ಈಗ ಅಂಥ ಅವಕಾಶ ದೊರೆತಿದೆ. ದುಷ್ಟರಾದ ಕಂಚ ಚುಂಚರನ್ನು ನಿಗ್ರಹಿಸುವ ಅವಕಾಶ ದೊರೆತಿದೆ. ಅವರೆಲ್ಲಿರುವರೆಂದು ಅರಸುತ್ತ ಹೊರಡುತ್ತೇನೆ.

[ಕಂಚ ಚುಂಚರೊಡನೆ ಚೂಣಿ ಕಾಳಗ. ಅನಂತರ ಕಂಚ]

ದ್ವಿಪದಿ

ನವಮಾಸ ಕಳೆವುತಿರೆ ಜನಿಸಿದನು ಕುವರ।
ಕವಿದ ಕತ್ತಲೆ ಕಳೆದುದಿನ್ನತರ ವಿವರ ॥1॥

ಮರೆತು ನಲಿದಾಡಿದನು ಭೂವರನು ತಾನು।
ತರಳನನು ನೋಡುತ್ತ ಸಂತಸದೊಳವನು ॥2॥

ಕೆತ್ತಿಸಿದ ದೇಗುಲದ ಕಂಬವೊಂದನ್ನು।
ಎತ್ತಲಾರದೆ ಜನರು ಬಳಲುತಿಹುದನ್ನು ॥3॥

ಕಂಡು ನೆನಪಾಯ್ತವಗೆ ಹಿಂದಿನಾ ಹರಕೆ।
ಕೊಂಡುದಕೆ ಕೊಡಿಸಿದನು ಮಗನಂಗೆ ದೀಕ್ಷೆ ॥4॥

ಜೋಗಿ ದೀಪಕನೆಂಬ ಪೆಸರಿನೊಳಗವನು।
ಆ ಗರುವ ವಂಶವನು ಬೆಳಗಿಸಿದನವನು ॥5॥

[ರಾಜನು ಬಿದಿರಿನ ತೊಟ್ಟಿಲನ್ನು ಮಾಡಿಸಿ ಪೂಜೆ ಮಾಡಿ ಶಿವನಗರ್ಪಿಸಿ ನವಮಾಸ ತುಂಬುತ್ತಲೇ ಮಗನು ಜನಿಸಿದ.ಈ ಸಂತೋಷ ಸಂಭ್ರಮದಲ್ಲಿ ಮೈಮರೆತ. ಮಗನಿಗೆ ಐದು ವರ್ಷವಾಗಿರುವಾಗ ದೇವಾಲಯಕ್ಕೆಂದು ನಿರ್ಮಿಸಿದ ಕಂಬವೊಂದನ್ನು ಹಲವಾರು ಜನರಿಂದಲೂ ಎತ್ತಲಾಗುವುದಿಲ್ಲ. ಆಗ ಹಿಂದೆ ಹೇಳಿಕೊಂಡಂತೆ ಮಗನಿಗೆ ಜೋಗಿಯ ದೀಕ್ಷೆಯನ್ನು ಕೊಡದಿದ್ದುದರ ಪರಿಣಾಮವಾಗಿ ಹೀಗಾಗಿದೆಯೆಂದು ತಿಳಿದು ಜೋಗಿದೀಕ್ಷೆಯನ್ನು ಕೊಡಿಸುತ್ತಾನೆ. ಕಂಬವನ್ನು ಸುಲಭವಾಗಿ ಎತ್ತಲು ಸಾಧ್ಯವಾಗುತ್ತದೆ. ಹುಡುಗನಿಗೆ ದೀಪಕಜೋಗಿಯೆಂದು ಹೆಸರಾಗುತ್ತದೆ.]

ಕಂಚ ಮತ್ತು ಚುಂಚರ ಪ್ರವೇಶ
ಭಾಮಿನಿ ಅರ್ಧ

ಖೂಳ ದೈತ್ಯರು ಕಂಚ ಚುಂಚರು
ಗೋಳುಗುಟ್ಟಿಸಿ ಜನರ ಮದಮುಖ
ರಾಳುತನದೊಳು ಚರಿಸುತೈತಂದರಬ್ಬರದೀ॥

ಕೇದಾರಗೌಳ ಅಷ್ಟ

ಜನನಿಯ ನೆನಪಿಲ್ಲ ಜನಕನ ತಿಳಿದಿಲ್ಲ।
ವನವೆ ನಮ್ಮಯ ಭವನ॥

ಗುಣಮಾರಿ ದೈತ್ಯನು ಸಲಹಿದನೆಮ್ಮನು।
ಘನತರ ದಯದಿಂದಲಿ ॥1॥

ಹೆಣ್ಣನ್ನು ಹೊತ್ತೊಯ್ದು ಚೆನ್ನಾಗಿ ಭೋಗಿಸಿ।
ತಿನ್ನುವ ಸುಖವೆ ಬೇರೆ॥
ಕಣ್ಣೀರು ಕೂಗಾಟ ಹಿನ್ನೆಲೆ ಸಂಗೀತ।
ಇನ್ನಷ್ಟು ಕೇಳಬೇಕು ॥2॥

ಚೋಳೂರ ದೇಶಕ್ಕೆ ದಾಳಿಯನಡಬೇಕು।
ಕೂಳ ಸಮೃದ್ಧಿಯಿಂದ॥
ಗೋಳ ಕಾಣದ ಜನ ಗೋಳವಾಗಿಹರಂತೆ।
ಲೀಲೆಯ ತೋರ್ಪುದಲ್ಲಿ ॥3॥

ಶಿವನ ಪ್ರವೇಶ
ಕಾಂಬೋಧಿ ಅಷ್ಟತಾಳ

ಬಂದನು ಪಾರ್ವತಿರಮಣ।ಸುರ।
ವಂದಿತ ಪಾವನಚರಣ॥ಪ॥
ಮಂದರಧರಮಿತ್ರ। ಸುಂದರತರಗಾತ್ರ।
ಅಂಧಕಾಸುರನಾಶ।ಅಂಬರವರಕೇಶ॥ಬಂದನು ॥1॥
ಕಾಲ ಭಯಂಕರ ।ಶೂಲಶೋಭಿತಕರ ।
ಬಾಲೇಂದುಶೇಖರ।ವ್ಯಾಳಕಂಕಣಧರ॥ಬಂದನು ॥2॥
ದೇವಗಂಗಾಧರ।ಭಾವಜಸಂಹಾರ।
ಸೇವಿಪ ಜನರಕ್ಷ।ಭಸ್ಮಾಂಗಭೂಷಿತ॥ಬಂದನು ॥3॥

[ಪ್ರಾಪಂಚಿಕರನ್ನು ಪೊರೆಯುವ ಸಲುವಾಗಿ ಭೂಲೋಕದ ವಿವಿಧ ಸ್ಥಳಗಳಲ್ಲಿ ನನ್ನ ಶಕ್ತಿಯನ್ನು ವಿಶಿಷ್ಟವಾಗಿ ಪ್ರಕಟಿಸುತ್ತ ಬಂದ ನಾನು ಹಿಂದೆ ಗಜಾರಣ್ಯದಲ್ಲಿ ನೆಲೆಸಿದ್ದೆ.ಅಂದು ಸೀತೆಯನ್ನು ಕಳೆದುಕೊಂಡ ರಾಮನು ಲಕ್ಷ್ಮಣ ಸಮೇತನಾಗಿ ಅಲ್ಲಿಗೆ ಬಂದಾಗ ಅವನಗೆ ಶಕ್ತಿಶಾಲಿಯಾದ ತ್ರಿಶೂಲವನ್ನು ಅನುಗ್ರಹಿಸಿ ಅಲ್ಲಿ ನೆಲೆಯಾಗಿ ನಲ್ಲುವಂತೆ ಆದೇಶಿಸಿ ಈ ಪರ್ವತದೆಡೆಗೆ ಬಂದು ಇಲ್ಲಿನ ರಮಣೀಯ ಪರಿಸರಕ್ಕೆ ಮೆಚ್ಚಿ ನೆಲೆಗೊಂಡಿದ್ದೇನೆ. ಇದೇನು?ಮುನಿಗಳು ಇತ್ತ ಕಡೆಗೆ ಧಾವಿಸಿ ಬರುತ್ತಿದ್ದಾರಲ್ಲ!

ಮುನಿಗಳ ಪ್ರವೇಶ
ಸಾಂಗತ್ಯ ರೂಪಕ

ಹರನೆ ಗಂಗಾಧರ ರಕ್ಷಿಸು ನಮ್ಮನು
ಪರಿಪೂರ್ಣದಯದಿಂದಲೆನುತ
ಚರಣಕ್ಕೆ ಮಣಿದ ಮುನಿಗಡಣವ ಕಂಡಾಗ
ಕರುಣವಾರಿಧಿಯಿದೇನೆನಲು ॥1॥

ಕಂಚ ಚುಂಚರ ಕಾಟ ಹೆಚ್ಚಿತು ನಮ್ಮನು
ಪಂಚಮುಖನೆ ಕಾಯಬೇಕು
ವಂಚಕರವರಿಂದ ಬಳಲಿದೆ ಬುವಿಯೆಲ್ಲ
ಸಂಚರಿಸುವುದತಿ ಕಷ್ಟ ॥2॥

ಸೌರಾಷ್ಟ್ರ ತ್ರಿವುಡೆ

ಚುಂಚನನು ಕರಕೊಂಡು ಭೈರವ ।
ಪಂಚಮುಖನಡಿಗೆರಗಿ ಪೇಳಲು।
ಚುಂಚಗಿರಿಯಲಿ ನೆಲಸು ಬಾಗಿಲ ।ರಕ್ಷೆಗಾಗಿ ॥1॥

ಭೈರವ, ನಿನ್ನ ಕಾರ್ಯದಿಂದ ಸಂತೋಷಗೊಂಡಿದ್ದೇನೆ. ಚುಂಚನಿಗೆ ಮಾತುಕೊಟ್ಟಂತೆ ನೀನು ಈ ಗಿರಿಯಲ್ಲಿ ನೆಲಸು. ಬಾಗಿಲ ಭೈರವನಾಗಿ, ಆಕಾಶ ಭೈರವನಾಗಿ ಕ್ಷೇತ್ರವನ್ನು ರಕ್ಷಿಸು ನಿರಂತರವಾಗಿ ಅನ್ನದಾಸೋಹವನ್ನು ನಡೆಸು. ಬಂದವರಿಗೆ ಜೋಗಿ ದೀಕ್ಷೆಯನ್ನು ಕೊಡುತ್ತಿರು.

ಭೈರವ– ದೇವಾ,ನೀನು ಈ ಕ್ಷೇತ್ರದಲ್ಲಿರುವುದಿಲ್ಲವೆ?

ಶಿವ–ನಾನು ಗಂಗಾಧರೇಶ್ವರ, ಕತ್ತಲೆಸೋಮೇಶ್ವರ, ಚಂದ್ರಮೌಳೇಶ್ವರ, ಮಲ್ಲೇಶ್ವರ ಮತ್ತು ಗವಿಸಿದ್ಧೇಶ್ವರರೆಂಬ ಹೆಸರಿನಲ್ಲಿ ಪಂಚಲಿಂಗಾತ್ಮಕನಾಗಿ ನೆಲಸುತ್ತೇನೆ. ಪಾರ್ವತಿ ದೇವಿಯು ಕೂಡ ಸ್ತಂಭಾಂಬಿಕೆ ಅಥವಾ ಕಂಬದಮ್ಮನ ರೂಪದಲ್ಲಿ ನೆಲಸುತ್ತಾಳೆ. ಇದು ನಾಥ ಸಂಪ್ರದಾಯದ ಕೇಂದ್ರವಾಗಲೆಂದು ಸಿದ್ಧಯೋಗಿಯನ್ನೂ ಅವನ ನೆರವಿಗೆ ನವನಾಥರನ್ನೂ ಸೃಜಿಸಿದ್ದೇನೆ. ಇದು ದಕ್ಷಿಣದ ಕಾಶಿಯೆಂದು ಪ್ರಸಿದ್ಧವಾಗಲಿ.
ಭೈರವ– ದೇವಾ, ನಿನ್ನ ಇಚ್ಛೆಯಂತಾಗಲಿ. [ನಿರ್ಗಮನ]

ಮಾಳಮ್ಮ ಅಥವಾ ಮಾಳವಿಯ ಪ್ರವೇಶ
ಮಧ್ಯಮಾವತಿ ತ್ರಿವುಡೆ

ಕುರುಬ ಕನ್ಯೆಯು ಮಾಳವಿಯು ತಾ।
ಸ್ಮರನ ಬಾಧೆಗೆ ಸಿಲುಕುತ॥
ಅರಸಿ ಬಂದಳು ಭೈರವಗೆ ತಾ।
ನರಸಿಯಾಗುವ ಮನದಲಿ ॥ಹರಿಣನೇತ್ರೆ॥1॥

ಕಾಪಿ ಅಷ್ಟ

ಕಂಡಳು ಭೈರವನನ್ನು।ಮುದ।
ಗೊಂಡಳು ಮಾಳವಿ ತನ್ನೊಳು ತಾನು॥
ಗಂಡಸರೊಳಗಿಂಥ ಚೆಲುವ।ಭೂ।
ಮಂಡಲದೊಳಗೆಲ್ಲಿ ಹುಡುಕಲು ಸಿಗುವ ॥1॥

ಭೈರವಿ ಅಷ್ಟ

ಯಾರೆಲೊ ವೀರ ನೀನು।ಎನ್ನನು ಗೆಲ್ವ।
ಶೂರ ತಾನೆಂಬೆಯೇನು॥
ಭೂರಿಬಲಾನ್ವಿತ ಕಂಚನು ನಾನಹೆ।
ಸಾರುವುದೊಳಿತೆಂಬೆನು ॥1॥

ಶರಣರ ಪೀಡಿಸುವ।ದೂರನು ಕೇಳಿ।
ಪರಿಪಾಲಿಸುವ ಭೈರವ॥
ಭರದಿ ಬಂದಿಹೆ ನೀನು ಶರಣಾದರೊಳಿತಿನ್ನು।
ಕರುಣದಿ ಕಾಯುವೆನು ॥2॥

ಅಲ್ಲ ನಾ ಬಡ ಮನುಜ।ಮತ್ತೀಜಗ।
ದಲ್ಲಣನಹ ದನುಜ॥
ಖುಲ್ಲ ನೀನೆನಗಿಂತ ಬಲ್ಲಿದನಹೆಯೇನು।
ಕಲ್ಲೊಳಿಟ್ಟರೆ ಸಾಯುವೆ ॥3॥

[ಯುದ್ಧ.ಕಂಚನ ಸಾವು.ಚುಂಚನ ಪ್ರವೇಶ]

ಶಂಕರಾಭರಣ ಮಟ್ಟೆ

ಯಾರೊ ನೀನು ಘೋರರೂಪಿ।ಮೂರು ಕಣ್ಣಿದೆ॥
ಭಾರಿ ಶೂಲ ಪೊತ್ತು ಧುರಕೆ।ಸಾರಿ ಬಂದಿಹೆ ॥1॥

ಭೈರವಾಖ್ಯನಹೆನು ನಾನು।ಕ್ರೂರಿದನುಜನೆ॥
ಊರ ಜನರ ಕಾಯಲೆಂದು।ಸಾರಿ ಬಂದಿಹೆ ॥2॥

ಬಂದ ಹಾದಿ ಹಿಡಿದು ಹೋಗು।ಮುಂದೆ ಬಂದರೆ॥
ಕೊಂದು ಕಳೆವೆ ಕೋಡಿನಂದ।ನಂದೆಯಾದರೆ ॥3॥

ಮಂದಮತಿಯೆ ವಂದಿಸೆನ್ನ।ಹಿಂದುಗಳೆಯದೆ॥
ಚಂದವಾಗಿ ಮುಂದೆ ಬದುಕು।ವಂದವರುಹುವೆ ॥4॥

ಮಾರವಿ ಏಕ

ಬಡವನು ನಾನೆಂದೆನುತಲಿ ತಿಳಿದೆಯ।
ಧಡಿಗನೆ ನಿಲ್ಲೆನುತ॥

ಬಡಬಡಿಸುತಲವ ತಿವಿಯಲು ಕೋಡಲಿ।
ಮೃಡನತಿ ಮೋದದಲಿ ॥2॥

ಪಿಡಿಯುತಲಾತನ ಕೋಡನು ಕೀಳಲು।
ಒಡನುರುಳುತ ಧರೆಗೆ॥
ಗಡಬಡಿಸುತ ಕರಗಳ ಜೋಡಿಸುತಲಿ।
ನುಡಿದನು ಮತ್ತವಗೆ ॥3॥

ಸಾವೇರಿ ಆದಿ

ಕರುಣದಿ ಕಾಯೊ ಎನ್ನ।ಭೈರವದೇವ।
ಶರಣು ಹೊಕ್ಕಿರುವೆ ನಿನ್ನ॥
ಅರಿಯದೆ ಗೈದಿರುವಪರಾಧವೆಲ್ಲವ।
ಮರೆತು ಪಾಲಿಪುದೆನ್ನ ಪರಮಕೃಪಾಕರ ॥1॥

ನವರೋಜು ಏಕ

ಚುಂಚನೆ ನಿನ್ನಯ ಮಾತು।ನಸು।
ವಂಚನೆಯಿಲ್ಲದೆ ಬಂತು॥
ಸಂಚಿತ ಕರ್ಮವಿಶೇಷದಿ ನಿನಗೀ।
ಚಂಚಲಬುದ್ಧಿಯು ತೊಲಗಿತು ರಕ್ಷಿಪೆ ॥1॥

ಅನ್ನೆಯದಾಸರೆ ತೊರೆದು।ಬದು।
ಕುನ್ನತಿಯಾ ಪಥವಿಡಿದು॥
ಸನ್ನುತ ನೀನಹೆಯೆನ್ನುತ ಭೈರವ।
ಸನ್ಮತಿವಂತನ ಕಣ್ಣೀರೊರೆಸಲು ॥2॥

[ಚುಂಚನು ಭೈರವನ ಕೈಯಿಂದ ಸುರಿಯುವ ನೆತ್ತರನ್ನು ನೋಡಿ]

ಭೈರವಿ ಝಂಪೆ

ಕಡುಚೋದ್ಯವರರೆ ಕಂಡೆನು ನಿನ್ನ ಪಾಣಿಯಿಂ ।
ದೆಡಬಿಡದೆ ನೆತ್ತರೊಸರುವುದೇನು ತಂದೆ॥
ಒಡನೆ ಪೇಳುವುದೆನಗೆ ಮುಡಿಯ ಚಾಚುವೆನಡಿಗೆ।
ಪೊಡವಿಯೊಳು ಹಿಂದೆಲ್ಲು ಕಂಡಿಲ್ಲವೆನಲು ॥1॥

ಹಿಂದೆ ಮಾಡಿದ ಕರ್ಮದಿಂದಲೀ ಗತಿಯಾಯ್ತು।
ಅಂದು ಬ್ರಹ್ಮನ ಶಿರವ ಚಿವುಟಿದೆನು ನಾನು॥
ಒಂದು ಚಣ ಬಿಡದೆನ್ನ ನೆತ್ತರನು ಹೀರುತಿದೆ।
ನೊಂದುಕೊಂಡಿರಲೇನು ಬಿಡದಯ್ಯ ಕರ್ಮ ॥2॥

ಬಿಡಿಸುವೆನು ನಾ ಶಿರವನೊಡೆಯ ನೀ ನೋಡೆಂದು।
ಒಡನೆ ಶ್ವಾನದ ರೂಪ ಧರಿಸುತ್ತ ಚುಂಚ॥
ನಡೆತರಲು ಹತ್ತಿರಕೆ ಕೆಡುತಿಹುದು ಮಡಿಯೆಂದು।
ಮೃಡನ ಬಿಟ್ಟೋಡಿತಾ ಬ್ರಹ್ಮನ ಕಪಾಲ ॥3॥

ಸುರುಟಿ ಏಕ

ಮೆಚ್ಚಿದೆ ನಾ ನಿನಗೆ।ಧರೆಯೊಳು।
ಮೆಚ್ಚಿನವನು ಎನಗೆ॥
ನಚ್ಚಿನ ಭಜಕ ನಿನ್ನಿಚ್ಛೆಯ ಸಲಿಸುವೆ।
ಸ್ವಚ್ಛಮನದಿ ನೀನುಚ್ಚರಿಸುವುದೆನೆ ॥1॥

ನಿನ್ನ ಹೊರಲು ಯೋಗ್ಯ।ಎನ್ನಿಸ।
ಲಿನ್ನು ಮಿಗಿಲು ಭಾಗ್ಯ॥
ಎಣ್ಣಿಸಲಾರೆನು ಇನ್ನೀ ಗಿರಿಗಿರ।
ಲೆನ್ನಯ ಪೆಸರೆಂದೆನ್ನುವ ಬಯಕೆಯು ॥2॥

[ಚುಂಚನ ಬೇಡಿಕೆಗೆ ಭೈರವನು ಸಮ್ಮತಿಸುತ್ತಾನೆ. ಆ ಗಿರಿಗೆ ಚುಂಚನಗಿರಿಯೆಂಬ ಹೆಸರು ಬರಲೆಂದೂ ಅವನು ಶ್ವಾನರೂಪದಲ್ಲಿ ತನಗೆ ವಾಹನವಾಗಿರಲೆಂದೂ ಹೇಳಿ, ತಮ್ಮನಿಗಾಗಿ ವರವನ್ನು ಕೇಳಿಕೊಳ್ಳುವಂತೆ ಹೇಳುತ್ತಾನೆ. ಅದರಂತೆ ಪಕ್ಕದೂರಿಗೆ ಕಂಚನಳ್ಳಿಯೆಂಬ ಹೆಸರು ಬರಲೆಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಭೈರವನು ಒಪ್ಪುತ್ತಾನೆ. ಚುಂಚನು ಶ್ವಾನರೂಪದಲ್ಲಿ ಅವನ ವಾಹನವಾಗುತ್ತಾನೆ]

ಕಾಂಬೋಧಿ ಝಂಪೆ

ಕೊಡುವೆ ದೀಕ್ಷೆಯ ನಿನಗೆ ಕಿನ್ನುಡಿಯ ಹೊರತಾಗಿ।
ಮಡುಹಿ ಪದ್ಮಾವತಿಯ ನೀನು॥
ಒಡಲೊಳಗೆ ಹುದುಗಿಹುದ ಪಡೆದು ಬರಬೇಕಿದುವೆ
ಕಡುಗಲಿಯ ಸತ್ವದಪರೀಕ್ಷೆ ॥1॥

ನಿನಗೆ ದೀಕ್ಷೆಯನ್ನು ಸಂತೋಷದಿಂದ ಕೊಡುವೆನಾದರೂ ಕಿನ್ನುಡಿಯನ್ನು ಕೊಡಲಾರೆ. ಅದನ್ನು ನೀನು ನಿನ್ನ ಪರಾಕ್ರಮದಿಂದ ಪಡೆಯಬೇಕು. ಸ್ತ್ರೀರಾಜ್ಯದ ರಾಣಿಯಾದ ಪದ್ಮಾವತಿಯ ಒಡಲಿನಲ್ಲಿ ಅದು ಸುರಕ್ಷಿತವಾಗಿದೆ. ಅವಳು ಕೇವಲ ಹೆಣ್ಣಲ್ಲ. ಹೆಣ್ಣು ವೇಷದ ರಕ್ಕಸಿ. ಮಹಾಮಾಯಾವಿನಿ. ಅವಳ ಸಂಹಾರವಾದ ಹೊರತು ಲೋಕಕ್ಕೆ ಕ್ಷೇಮವಿಲ್ಲ. ಅವಳನ್ನು ಕೊಲ್ಲುವ ಮೂಲಕ ಲೋಕಹಿತವನ್ನು ಸಾಧಿಸುವ ಅವಕಾಶ ನಿನಗೊದಗಿದೆ.

ಅರ್ಜುನ–ಹಾಗೇ ಆಗಲಿ.

ಪದ್ಮಾವತಿಯ ಪ್ರವೇಶ
ಸೌರಾಷ್ಟ್ರ ತ್ರಿವುಡೆ

ಇತ್ತ ಸ್ತ್ರೀರಾಜ್ಯವನು ಪಾಲಿಪ।
ವೃತ್ತಕುಚೆ ಪದ್ಮಾವತಿಯು ಬಲು।
ಧೂರ್ತಳೆನಸಿಯೆ ಮೆರೆವುತಿರಲು।ನ್ಮತ್ತಳಾಗಿ ॥1॥

[ಪದ್ಮಾವತಿಯು ಪಾರ್ಥನು ಬರುವುದನ್ನು ನೋಡಿ ಮೋಹಗೊಳ್ಳುತ್ತಾಳೆ]

ಮೋಹನ ಅಷ್ಟ

ಅಹಹ ಎಂಥ ಸುಂದರ ಪುರುಷ।ಕಣ್ಗೆ।
ತುಹಿನಕಿರಣನ ಸ್ಪರ್ಶ॥
ಮಹಿಯೊಳೆಲ್ಲಿಯು ಕಾಣೆ ಮಿಡಿಯುವುದೆದೆ ವೀಣೆ।
ಅಹಿಯಂತೆ ಬಳಸದೆ ಸಹಿಪೆನೆ ಸ್ಮರಬಾಧೆ॥1॥

ರೂಪಕ

ಕಾಡುತಿಹನು ಕೇಡಿ ಮದನ।ಬಾಡಿ ಹೋದೆನು॥
ಪಾಡುಪಟ್ಟು ಕಾಡಿನಿಂದ।ಓಡಿ ಬಂದೆನು॥
ನೀಡು ಕರವ ಜೋಡಿಯಾಗಿ।ಮಾಡಿ ಯುದ್ಧವ॥
ಖೋಡಿಯನ್ನು ಗೆಲಿದು ನಿಂತು।ಹಾಡಿ ನಲಿಯುವ ॥1॥

ಕೇದಾರಗೌಳ ಝಂಪೆ

ಮಾರನಸ್ತ್ರಕೆ ಸಿಲುಕೆನು।ಹಲುಬದಿರು।
ನಾರಿಯರ ವಶವಾಗೆನು॥
ಮೀರಿ ನೀತಿಯ ಪಥವನು।ನಿನ್ನಪಿತ।
ಭಾರಿಶಿಲೆಯಾಗಿರ್ಪನು ॥1॥

[ತಾನು ಬಲಶಾಲಿಯೆಂಬ ಗರ್ವದಿಂದ ಮಾಳಮ್ಮನ ತಂದೆಯು ಬಂದು ಭೈರವನನ್ನು ಕೆಣಕಿ ಕಲ್ಲಾದುದನ್ನು ಹೇಳಬೇಕು]

ಶಂಕರಾಭರಣ ರೂಪಕ

ಕಲ್ಲುಮನಸಿನವನೆ ಕೇಳು ।ಸೊಲ್ಲನೊಂದನು॥
ನಿಲ್ಲದೆನ್ನ ಮನವದನ್ಯ।ನಲ್ಲಿಯೆಂಬೆನು॥
ಕಲ್ಲರೂಪವನ್ನು ಕೊಟ್ಟು।ನಲ್ಲಿಸಿಲ್ಲಿಯೆ॥
ಸಲ್ಲಿಸೊಂದು ವರವ ಮಡಿವೆ।ನಲ್ಲವೆಂದರೆ॥

[ಅವಳ ಕೋರಿಕೆಯನ್ನು ಕೇಳಿ ತನ್ನ ಮೇಲೆ ಅವಳಿಗಿರುವ ನಿಶ್ಚಲವಾದ ಪ್ರೀತಿಯನ್ನು ಮೆಚ್ಚಿ ಹಾಗೇ ಆಗಲೆಂದೂ ಸ್ತಂಭಾಂಬಿಕೆಯ ಬಳಿಯಲ್ಲಿಯೇ ಮಾಳಮ್ಮನೆಂಬ ಹೆಸರಿನಿಂದ ಶಿಲಾರೂಪದಲ್ಲಿದ್ದು ಪೂಜೆಗೊಳ್ಳುವಂತಾಗಲೆಂದು ವರವನ್ನು ಕೊಡುತ್ತಾನೆ. ಅವಳು ಶಿಲೆಯಾಗುತ್ತಾಳೆ.]

ಶೆಟ್ಟಿಯ ವೇಷ ಧರಿಸಿದ ತಿಮ್ಮಪ್ಪನ ಪ್ರವೇಶ
ಮೋಹನ ಅಷ್ಟ

ಸೆಟ್ಟಿಯ ರೂಪವನು।ಧರಿಸುತ್ತಲಾ।
ಬೆಟ್ಟದ ತಿಮ್ಮಪ್ಪ ತಾನು॥
ಘಟ್ಟವನೇರುತ್ತ ಬರುವಾಗಲ್ಲಿಯೆ।
ಕತ್ತಲಾವರಿಸಲು ಭೈರವನೆಡೆ ಬಂದು ॥1॥

ಪಯಣಿಗನಹೆನು ನಾನು। ಈ ರಾತ್ರಿಗೆ।
ದಯದೊಳಗೆಡೆಯ ನೀನು॥
ಪ್ರಿಯದಿಂದಲಿತ್ತರೆ ಸಮಯವ ಕಳೆಯುವ।
ಬಯಸಿದೆಯಾದರೆ ದ್ಯೂತವನಾಡುವ ॥2॥

ಈ ರೀತಿಯಲ್ಲಿ ಆಸರೆಯನ್ನು ಬಯಸಿದ ಸೆಟ್ಟಿಗೆ ಅವಕಾಶ ನೀಡಿ ಹೊತ್ತುಗಳೆಯಲು ಜೂಜಿಗೆ ತೊಡಗುತ್ತಾರೆ. ಸೆಟ್ಟಿಯು ಸೋತು ತಾಳ, ಜಾಗಟೆಗಳನ್ನು ಭೈರವನಿಗೆ ಒಪ್ಪಿಸುತ್ತಾನೆ. ಈಗ ಭೈರವನ ಪಾಳಿ. ಅವನು ಸೋತರೆ ಕ್ಷೇತ್ರವನ್ನು ಬಿಟ್ಟು ಹೋಗುವೆ ಮತ್ತು ನಿನ್ನ ವಸ್ತುಗಳನ್ನು ನಿನಗೆ ಮರಳಿಸುವುದಾಗಿ ಹೇಳುತ್ತಾನೆ. ಭೈರವ ಆಟದಲ್ಲಿ ಸೋತು ಕ್ಷೇತ್ರವನ್ನು ಬಿಟ್ಟು ಹೊರಡಲು ಸೆಟ್ಟಿಯು ಅಕ್ಷಯ ಪಾತ್ರೆಯನ್ನು ಕೊಡುವಂತೆ ಹೇಳುತ್ತಾನೆ. ಅದನ್ನು ಪಣವಾಗಿ ಇಟ್ಟಿಲ್ಲವಾದುದರಿಂದ ಕೊಡುವುದಿಲ್ಲವೆಂದು ನಿರಾಕರಿಸಿದಾಗ ಸೆಟ್ಟಿಯು ಅವನನ್ನು ಸೆರೆಯಲ್ಲಿಡುತ್ತಾನೆ. ಭೈರವನು ತನ್ನ ಶಕ್ತಿಯಿಂದ ಹೊರಬಂದು ನೋಡಿದಾಗ ಸೆಟ್ಟಿಯು ನಿದ್ದೆಯಲ್ಲಿರುತ್ತಾನೆ.

ಶಂಕರಾಭರಣ ಏಕ

ಸದ್ದ ಮಾಡದಂತೆ ಬಂದು।ನಿದ್ದಿಸುವನ ನೋಡಲಲ್ಲಿ।
ಶುದ್ಧಸ್ವರ್ಣರಥವು ಮಿನುಗೆ।ಕದ್ದು ಪೋಪೆನು ॥1॥

ತನ್ನಲ್ಲಿ ಪಣವಾಗಿ ಇಡಲು ಇನ್ನೇನೂ ಇಲ್ಲವೆಂದು ಸುಳ್ಳು ಹೇಳಿದ ಇವನಿಗೆ ಬುದ್ಧಿ ಕಲಿಸುವುದಕ್ಕಾಗಿ ಇವನ ಚಿನ್ನದ ತೇರನ್ನು ಕದ್ದೂಕೊಂಡು ಹೋಗುತ್ತೇನೆ. ನನ್ನನ್ನು ಕಳ್ಳ ಭೈರವನೆಂದು ಕರೆದರೂ ಚಿಂತೆಯಿಲ್ಲ.

– ಪದ್ಯ –

ಕಳ್ಳಹೆಜ್ಜೆಯಿಡುತಲವನು।ಸೊಲ್ಲುಸದ್ದ ಮಾಡದಂತೆ।
ಯಲ್ಲಿಯವನ ಸ್ವರ್ಣರಥವ।ಮೆಲ್ಲನೊಯ್ದನು॥2॥

ಭೈರವಿಝಂಪೆ

ಸೆಟ್ಟಿಯೆಚ್ಚರಗೊಂಡು ರಥವಲ್ಲಿ ಕಾಣದಿರೆ।
ಥಟ್ಟನರಿಯುತ ಕಳ್ಳನಾರೆಂಬುದನ್ನು॥
ಗಟ್ಟಿಗನ ಹಿಡಿಯಿರೆನುತೋಡಿದನು ಬೆನ್ನಟ್ಟಿ।
ಉಟ್ಟಧೋತ್ರದ ಸೆರಗನಳವಡಿಸಿ ಭರದಿ ॥1॥

[ಭೈರವನು ಬಿಂದು ಸರೋವರದಲ್ಲಿ ರಥವನ್ನು ಅಡಗಿಸಿಟ್ಟು ಓಡುತ್ತಾನೆ. 'ಕಳ್ಳಭೈರವ', 'ಕಳ್ಳಭೈರವ'ಎಂದು ಕೂಗುತ್ತ ಸೆಟ್ಟಿಯು ಹಿಂಬಾಲಿಸುತ್ತಾನೆ. ಓಡಿ ಸಾಕಾಗಿ ಆದಿಶೇಷನಿಗೆ ಭೈರವನನ್ನು ಹಿಡಿಯಲು ಹೇಳುವೆನೆಂದು ನಿರ್ಗಮಿಸಬೇಕು. ನಾನು ಆಕಾಶ ಭೈರವ. ನನ್ನನ್ನು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ನನ್ನನ್ನು ಹಿಡಿಯಬಂದ ನೀನು ಕಲ್ಲಾಗು' ಎಂದಾಗ ಶೇಷನು ಕಲ್ಲಾಗುತ್ತಾನೆ.]

ಅರ್ಜುನನ ಪ್ರವೇಶ
ಮಧುಮಾಧವಿ ತ್ರಿವುಡೆ

ಬಂದು ಪಾರ್ಥನು ಚುಂಚಗಿರಿಯನು।
ನಂದು ನೋಡಿದ ಪ್ರಕೃತಿ ದೇವಿಯ।
ಸುಂದರದ ಗುಡಿಯಿದುವೆ ಕೆಲದಿನ।
ನಿಂದು ಮುಂದಕೆ ತೆರಳುವೆ॥1॥

ಇಂದ್ರಪ್ರಸ್ಥದಲ್ಲಿ ಸುಖವಾಗಿರುವಾಗ ಅಗ್ರಹಾರವನ್ನು ಕಳ್ಳರು ಬಂದು ದೋಚುತ್ತಿದ್ದಾರೆಂದು ಬ್ರಹ್ಮಣರು ಬಂದು ದೂರು ಕೊಟ್ಟರು. ಪ್ರಜೆಗಳನ್ನು ರಕ್ಷಿಸುವುದು ರಾಜರ ಹೊಣೆ. ಸುಮ್ಮನಿರುವುದುಂಟೆ? ತಕ್ಷಣದಲ್ಲಿ ರಕ್ಷಣೆಗೆ ಹೊರಟೆ. ಆದರೆ ನನ್ನ ಧನುಸ್ಸನ್ನು ತರುವುದಕ್ಕೆ ಅಣ್ಣನ ಶಯನಾಗಾರವನ್ನು ದಾಟಿ ಹೋಗಬೇಕಿತ್ತು. ಏಕಾಂತಭಂಗಕ್ಕೆ ತೀರ್ಥಯಾತ್ರೆಯು ಅವಶ್ಯವಾಗಿತ್ತು. ಆದರೆ ಅದಕ್ಕಂಜಿ ಪ್ರಜಾರಕ್ಷಣೆಯನ್ನು ಬಿಡುವಂತಿರಲಿಲ್ಲ. ಆದ್ದರಿಂದ ಶಯನಾಗಾರವನ್ನು ಪ್ರವೇಶಿಸಿದೆ. ಅಣ್ಣನಿಗೆ ವಿಷಯವನ್ನು ನಿವೇದಿಸಿ ತೀರ್ಥಯಾತ್ರೆಗೆ ಬಂದೆ. ಹಲವಾರು ಪ್ರದೇಶಗಳನ್ನು ನೋಡಿದೆ. ಆದರೆ ಈ ಪ್ರದೇಶದ ಚೆಲುವಿನ ಮುಂದೆ ಅವು ಸೋಲುವುದು ಖಂಡಿತವೆನಿಸುತ್ತಿದೆ. ಈ ಪ್ರದೇಶ ಪ್ರಪಂಚದಲ್ಲಿಯೇ ಅತ್ಯಂತ ಸುಂದರವೆನಿಸುತ್ತದೆ. ಅಷ್ಟೇ ಪವಿತ್ರವಾದುದು ಕೂಡ. ಪರಮಶಿವನು ಪಂಚಲಿಂಗಾತ್ಮಕನಾಗಿ ಇಲ್ಲಿ ನೆಲಸಿದ್ದಾನೆ. ಕಾಲಭೈರವನು ಕಾವಲುಗಾರನಾಗಿದ್ದಾನೆ. ಇಲ್ಲಿ ಜೋಗಿ ದೀಕ್ಷೆಯನ್ನು ಪಡೆಯುವ ದಿವ್ಯವಾದ ಅವಕಾಶ ಪ್ರಾಪ್ತವಾಗಿದೆ. ಆದ್ದರಿಂದ ಭೈರವೇಶ್ವರನನ್ನು ಕಂಡು ದೀಕ್ಷೆಯನ್ನು ಪಡೆಯುತ್ತೇನೆ. [ನಿರ್ಗಮನ]

ದೇಶಿ ಅಷ್ಟತಾಳ

ಆದಿಚುಂಚನಗಿರಿಯ ಗುರುವರ ಬಾಲಗಂಗಾಧರರಿಗೆ।
ಬೋಧ ಭೋಜನ ಸ್ವಾಸ್ಥ್ಯಮಂತ್ರವ ಬೋಧಿಸಿದ ಶ್ರೀಗುರುವಿಗೆ॥ಮಂಗಲಂ॥
ನಾಥಪಂಥವ ಲೋಕದಲಿ ವಿಖ್ಯಾತಗೊಳಿಸಿದ ಮಹಿಮಗೆ।
ಜಾತನೆನಿಸಿದಜಾತಪುರುಷನ ಪರಮಕರುಣಾಮೂರ್ತಿಗೆ॥ಮಂಗಲಂ॥

ಸಮಾಪ್ತ

[ಅರ್ಜುನನ ಬಳಿ ಬಂದು]

ಬಿಲಹರಿ ರೂಪಕ

ಮದನರೂಪ ಹೃದಯಸದನ।
ಕದವ ತೆರೆದು ಕಾದಿದೆ॥
ಮಧುರರಸದ ಕುಂಭ ತುಂಬಿ।
ಮುದವನೀವೆನೆನುತಿದೆ ॥1॥

ಕೇದಾರಗೌಳ ಝಂಪೆ

ದುರುಳೆ ನಿನ್ನಯ ಮೋಸವ।ತಿಳಿದು ನಾ।
ಕರುಳನುಗಿಯಲು ಬಂದವ॥
ಉರುಬಲಾನ್ವಿತ ಪಾರ್ಥನು।ನನ್ನೊಡಲ।
ಹರಿದು ಕಿನ್ನುಡಿಯೊಯ್ವೆನು ॥1॥

ಮಾರವಿ ಏಕ

ನರಗುರಿ ಸತ್ವವನರಿಯದೆ ಬೊಗಳುವೆ।
ಧರೆಯೊಳಗೆನ್ನದಿರು॥
ಸರಿಸಮ ಸೆಣಸುವ ಪುರುಷರ ಕಾಣೆನು।
ವರಿಸುವ ಮನಮಾಡು॥1॥

ಎಲ್ಲವರಂತಿವನಲ್ಲವು ನರ ಧುರ।
ಮಲ್ಲನು ಧರಣಿಯೊಳು॥
ಸಲ್ಲದು ಹೆಣ್ಣನು ಕೊಲ್ಲುವು ದೆನ್ನುತ।
ಖುಲ್ಲಳೆ ತಡೆದಿಹೆನು॥2॥

ಪಂಚಾಗತಿ ಮಟ್ಟೆ

ವೀರ ಫಲುಗುಣ।ಕ್ರೂರ ಶರವನು।
ಭೋರನೆಸೆಯೆ ನಾರಿ ರಕ್ತ।ಕಾರಿ ಬಿದ್ದಳು ॥1॥

[ಹೀಗೆ ಅರ್ಜುನನು ಪದ್ಮಾವತಿಯನ್ನು ಕೊಂದು ಅವಳ ಒಡಲಿನಲ್ಲಿದ್ದ ಕಿನ್ನುಡಿಯನ್ನು ತಂದು ಭೈರವನಿಗೆ ಕೊಟ್ಟು ಶಿವನಾಮಸಂಕೀರ್ತನೆಯನ್ನು ಮಾಡುತ್ತ ಕಾಲ ಕಳೆಯುತ್ತಿರುತ್ತಾನೆ]

ದೇವಾಜಮ್ಮನ ಪ್ರವೇಶ

ಸಾಂಗತ್ಯ ರೂಪಕ

ತರುಣಿ ದೇವಾಜಮ್ಮತರಕಾರಿ ಹೆಚ್ಚುತ್ತ
ಉರುತರ ಸಂಭ್ರಮದಿಂದ
ತರಳನ ನಾಮಕರಣಕೆಂದು ತೊಡಗಿರೆ
ನರಜೋಗಿ ಪಾಡುತ್ತ ಬಂದ ॥1॥

ಮದುವೆಯಾಗಿ ಹತ್ತು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಬಂಜೆ ಬಂಜೆಯೆಂದು ಹಂಗಿಸುತ್ತಿರುವುದನ್ನು ಕೇಳಿ ಯಾಕಾದರೂ ಬದುಕಿದೆನೊ ಎನಿಸಿತ್ತು ಭೈರವೇಶ್ವರನ ಕಣ್ತೆರೆದ. ಗಂಡುಮಗನಿಗೆ ತಾಯಿಯೆನಿಸಿದೆ. ಅಂದು ತಿರಸ್ಕಾರದಿಂದ ನೋಡುತ್ತಿದ್ದವರೆಲ್ಲ ಇಂದು ಆದರ ತೋರುತ್ತಿದ್ದಾರೆ. ಮಗುವಿನ ಮುದ್ದು ಮುಖವನ್ನು ಕಂಡಾಗ ಆಗುವ ಸುಖವೇ ಬೇರೆ. ಇಂದು ಮಗುವಿಗೆ ನಾಮಕರಣ. ಬಂಧು ಬಾಂಧವರೆಲ್ಲ ಸೇರಿದ್ದಾರೆ. ಬೇಗ ಅಡುಗೆಯಾಗಬೇಕು. ತರಕಾರಿ ಹೆಚ್ಚಬೇಕು. ಮಗುವಿಗೆ ಹಾಲು ಬೇಕಾದೀತು. ಪಕ್ಕದಲ್ಲಿಯೇ ಮಲಗಿಸಿಕೊಂಡು ತರಕಾರಿ ಹೆಚ್ಚುತ್ತೇನೆ. ಆಹಾ ಯಾರದೋ ಹಾಡು ಕೇಳುತ್ತಿದೆಯಲ್ಲ! ಎಷ್ಟು ಮಧುರವಾಗಿದೆ! ಅದನ್ನು ಕೇಳುತ್ತ ಕುಳಿತುಕೊಂಡರೆ ಕೆಲಸ ಹಾಗೇ ಉಳಿದೀತು. ಕೇಳುತ್ತ ಕೆಲಸವನ್ನು ಮುಂದುವರಿಸುತ್ತೇನೆ.

[ಹಿನ್ನೆಲೆಯಲ್ಲಿ]

ಕಾಂಬೋಧಿ ಅಷ್ಟ

ಭವಹರ ಗಂಗಾಧರ।ಕಾಯುವುದೆಮ್ಮ।
ಶಿವ ಮೃಡ ಗೌರೀವರ ॥ಪ॥
ಕಾಲಭೈರವನಾಗಿ ಪಾಲಿಪೆ ಲೋಕವ।
ಕಾಲಕಂಧರದೇವ ಚುಂಚನ ಗಿರಿವಾಸ ॥1॥

[ತರಕಾರಿಯನ್ನು ಹೆಚ್ಚುತ್ತಿದ್ದ ದೇವಾಜಮ್ಮ ಹಾಡನ್ನು ಕೇಳುತ್ತ ಮೈಮರೆತು ಮಗುವನ್ನೂ ಹೆಚ್ಚುವಳು. ಅದನ್ನು ಅಲ್ಲಿಗೆ ಬಂದ ಅವಳ ಮಾವನು ನೋಡಿ ಬೊಬ್ಬೆಯಿಡುವನು. ಆಗ ಎಚ್ಚತ್ತು ಗೋಳಾಡುವಳು. ಅನಂತರ ಇದಕ್ಕೆ ಜೋಗಿಯ ಹಾಡೇ ಕಾರಣವೆಂದು ಹೇಳುವಳು. ಹಾಗಾದರೆ ಅವನೊಬ್ಬ ಮಹಾತ್ಮನೇ ಆಗಿರಬೇಕೆಂದು ಮಾವನು ಓಡಿಹೋಗಿ ಅವನನ್ನು ಕರೆತರುವನು. ಅರ್ಜುನನು ಮರುಗಿ ಕಾಲಭೈರವನನ್ನು ಪ್ರಾರ್ಥಿಸುವನು.]

ಭೈರವಿ ತ್ರಿವುಡೆ

ಕಾಲಭೈರವ ಕಾಯೊ ನಮ್ಮನು।ಕಾಲದರ್ಪವಿನಾಶನೆ॥
ನೀಲಕಂಧರ ಶೂಲಪಾಣಿಯೆ।ಭಾಲನೇತ್ರ ಮಹೇಶನೆ ॥1॥

ಯೋಗಿವರ್ಯನೆ ಭೋಗಿಭೂಷಣ।ಆಗಮಪ್ರಿಯ ಶಂಕರ॥
ವ್ಯಾಘ್ರಚರ್ಮಾಂಬರನೆ ಚುಂಚನ।ಗಾಗ್ರವಾಸನೆ ಶಶಿಧರ ॥2॥

[ಪ್ರಾರ್ಥನೆಯ ಕೊನೆಯಲ್ಲಿ ಭೈರವನು ಪ್ರತ್ಯಕ್ಷನಾಗಿ ಮಗುವನ್ನು ಬದುಕಿಸಿ ನೀವೆಲ್ಲರೂ ಒಕ್ಕಲಿಗರಾಗಿ ನೆಲವನ್ನು ಉತ್ತು ಬಿತಿ ಬೆಳೆದು ಸಮೃದ್ಧಿಯನ್ನು ಹೊಂದಿರೆಂದೂ ನನ್ನಒಕ್ಕಲಾದವರನ್ನು ಯಾವಾಗಲೂ ಕಾಯುವೆನೆಂದು ಹೇಳುತ್ತಾನೆ.]

ರಥೋತ್ಸವ ಸಂಭ್ರಮ

ತೇರನೆಳೆಯುವ ಬನ್ನಿರೊ।ನೀವೆಲ್ಲರು ॥ಪ॥
ಭೈರವೇಶ್ವರ ದೇವ ಕುಳಿತಿರ್ಪ ನೋಡಿ।
ಕೋರಿದಿಷ್ಟಾರ್ಥವ ನೀಡುವ ಪಾಡಿ॥
ದೂರದೂರಿಂದೈತಂದವರ್ರೂಡಿ।
ಮಾರಾರಿರೂಪಗೆ ಜಯಕಾರ ಮಾಡಿ ॥1॥
ಒಕ್ಕಲಾದವರನ್ನು ಕಾಯುವ ದೇವ।
ಒಕ್ಕಲಿಗರ ಮೇಲೆ ವಾತ್ಸಲ್ಯ ಭಾವ॥
ಸೊಕ್ಕ ತೋರಿದರೀತ ಮುಕ್ಕುವ ನೋಡಿ।
ಒಕ್ಕೊರಲಿಂದಲಿ ಜಯಕಾರ ಪಾಡಿ ॥2॥

ಮಂಗಲಪದ

ಯಮುನಾಕಲ್ಯಾಣಿ ತ್ರಿವುಡೆ

ಮಂಗಳಂ ಜಯ। ಮಂಗಳಂ ಶುಭ। ಮಂಗಳಂ ಭೈರವನಗೆ॥
ಮಂಗಲಾಂಗ ಸಿತಾಂಗ ಮನ್ಮಥ। ನಂಗಭಂಗವ ಗೈದಗೆ॥ಮಂಗಲಂ ॥1॥